**ಸ್ಥಾಪನೆ : 1966**
**ನೋಂದಣಿ ಸಂಖ್ಯೆ : ಡಿ.ವೈ.ಆರ್.443**

ಪ್ರಧಾನ ಕಛೇರಿ : 080-23151204, 23152073
ಬಸವೇಶ್ವರನಗರ ಶಾಖೆ : 080-23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080-23183734
e-mail : contact@rcbl.co Website: www.rcbl.co

# ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

## 57ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿನಾಂಕ **31-03-2024** ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2023-24ನೇ ಸಾಲಿನ) 57ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ **15-09-2024** ರಂದು ಭಾನುವಾರ ಬೆಳಿಗ್ಗೆ 09-30 ಘಂಟೆಗೆ **ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ. ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ "ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ," ಡಾ॥ ರಾಜ್ ಕುಮಾರ್ ರಸ್ತೆ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010** ಈ ವಿಳಾಸದಲ್ಲಿ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

### ಕಾರ್ಯಕ್ರಮಗಳು

1. ಜ್ಯೋತಿ ಬೆಳಗಿಸುವ ಮೂಲಕ ಸಭೆಯ ಉದ್ಘಾಟನೆ
2. ಪ್ರಾರ್ಥನೆ
3. ಅಧ್ಯಕ್ಷರಿಂದ ಸ್ವಾಗತ ಭಾಷಣ
4. ಚಿರಸ್ಮರಣೆ.
5. ಸರ್ವಸದಸ್ಯರ ಸಭೆಯ ಮೀಟಿಂಗ್ ನೋಟಿಸನ್ನು ಓದುವುದು.
6. 2022-23ನೇ ಸಾಲಿನ ಸರ್ವಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.
7. 2023-24ನೇ ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿಯ ಅಂಗೀಕಾರ
8. 2023-24ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ.
9. 2023-24ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2023-24ನೇ ಸಾಲಿನ ಅಂದಾಜು ಮಾಡಿದ ವೆಚ್ಚಕ್ಕಿಂತ ಹೆಚ್ಚುವರಿಯಾದ ವೆಚ್ಚಕ್ಕೆ ಅನುಮೋದನೆ.
11. 2024-25ನೇ ಸಾಲಿನ ಅಂದಾಜು ಆಯ-ವ್ಯಯಗಳ ಅಂಗೀಕಾರ
12. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಪಟ್ಟಿ ಮಾಡಿರುವ ಪೈಕಿ 2024-25ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವವರ ಬಗ್ಗೆ (ಆರ್.ಬಿ.ಐ ರವರ ಅನುಮತಿಗೊಳಪಟ್ಟು)
13. ಉಪವಿಧಿಗಳ ತಿದ್ದುಪಡಿಗೆ ಪ್ರಸ್ತಾಪ (ಸರ್ಕಾರದ ರಾಜ್ಯಪತ್ರ ಆದೇಶಕ್ಕೆ ಒಳಪಟ್ಟು)
14. ಸದಸ್ಯರುಗಳಿಂದ ಬಂದ ವಿಷಯಗಳ ಪರಿಶೀಲನೆ.
15. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬೇಕಾದ ಇತರೆ ವಿಷಯಗಳು.
16. ವಂದನಾರ್ಪಣೆ

**ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ**

ಸಹಿ/-

ಸ್ಥಳ : ಬೆಂಗಳೂರು
ದಿನಾಂಕ : **29-08-2024**

**(ಅನುಷ. ಎಂ. ಎಸ್)**
**ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಪ್ರ)**

## ವಿಶೇಷ ಸೂಚನೆ

1) ಸದಸ್ಯರು ವಾರ್ಷಿಕ ವರದಿ ಪುಸ್ತಕವನ್ನು ದಿನಾಂಕ **09 -09-2024** ರಿಂದ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.

2) ಬ್ಯಾಂಕಿಗೆ ಬಂದು ಪಡೆಯಲು ಸಾಧ್ಯವಾಗದ ಸದಸ್ಯರು ಬ್ಯಾಂಕಿನ ವೆಬ್‌ಸೈಟ್ **www.rcbl.co** ನಲ್ಲಿ ಪ್ರಚುರಗೊಳಿಸಿರುವ ವಾರ್ಷಿಕ ವರದಿಯನ್ನು ಓದಬಹುದು.

3) ವಿಷಯ **14**ಕ್ಕೆ ಸಂಬಂಧಿಸಿದಂತೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಇಚ್ಛೆಯುಳ್ಳ ಸದಸ್ಯರು ದಿನಾಂಕ **12-09-2024**ರ ಒಳಗೆ ಚರ್ಚಿಸಬೇಕಾದ ವಿಷಯದ ಬಗ್ಗೆ ಲಿಖಿತ ಪತ್ರವನ್ನು ವ್ಯವಸ್ಥಾಪಕರಿಗೆ ಸಲ್ಲಿಸಬಹುದಾಗಿದೆ.

4) ಸದಸ್ಯರೆಲ್ಲರೂ ಬ್ಯಾಂಕಿನಿಂದ ಪಡೆದಿರುವ ತಮ್ಮ ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ವಿನಂತಿ. ಇದುವರೆವಿಗೂ ತಮ್ಮ ಗುರುತಿನ ಚೀಟಿಯನ್ನು ಪಡೆಯದೆ ಇರುವ ಸದಸ್ಯರು ಕೂಡಲೇ ತಮ್ಮ 2 ಪಾಸ್‌ಪೋರ್ಟ್ ಭಾವಚಿತ್ರವನ್ನು ಸಲ್ಲಿಸಿ, ಗುರುತಿನ ಚೀಟಿಯನ್ನು ಪಡೆಯುವುದು.

5) ಷೇರು ಪ್ರಮಾಣ ಪತ್ರ ಪಡೆಯದೇ ಇರುವ ಸದಸ್ಯರು ಕೂಡಲೇ ಕಛೇರಿಗೆ ಬಂದು ಪಡೆಯಲು ಕೋರಿದೆ.

6) ಸದಸ್ಯರುಗಳು ತಮ್ಮ ಖಾತೆಗಳಿಗೆ ನಾಮ ನಿರ್ದೇಶನ ಮಾಡದೇ ಇದ್ದ ಪಕ್ಷದಲ್ಲಿ ಕೂಡಲೇ ಬಂದು ನಾಮಿನೇಷನ್ ಫಾರಂ ಸಲ್ಲಿಸಲು ಸೂಚಿಸಿದೆ.

7) ಸದಸ್ಯರು ತಮ್ಮ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ಬ್ಯಾಂಕಿಗೆ ನೀಡಿ ನೋಂದಾಯಿಸಿಕೊಳ್ಳತಕ್ಕದ್ದು. ಹಾಗೂ ಸದಸ್ಯರ ಮನೆ ವಿಳಾಸ, ದೂರವಾಣಿ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯಾಗಿದ್ದಲ್ಲಿ ಬ್ಯಾಂಕಿಗೆ ಬಂದು ನೀಡುವುದು.

8) ನಮ್ಮ ಬ್ಯಾಂಕಿನ ತಮ್ಮ ಖಾತೆಗಳಿಗೆ ಇತ್ತಿಚೀನ ಭಾವಚಿತ್ರದೊಂದಿಗೆ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸಿ ತಮ್ಮ ಸಹಿಯನ್ನು ನವೀಕರಿಸುವುದು ಹಾಗೂ ಕೆ.ವೈ.ಸಿ (KYC) ದಾಖಲೆಗಳ ಪ್ರತಿಗಳನ್ನು ನೀಡುವುದು.

9) ಬ್ಯಾಂಕಿನ ಬೈಲಾ ಸಂಖ್ಯೆ 19, 20 ಹಾಗೂ 47 ರನ್ವಯ ಸದಸ್ಯರು ತಮ್ಮ ಮತದಾನದ ಹಕ್ಕನು ಚಲಾಯಿಸಲು ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು (2) ಸಾಮಾನ್ಯ ಸಭೆಗಳಿಗೆ ಹಾಜರಾಗುವುದು ಕಡ್ಡಾಯ ಹಾಗೂ ಉಪ ವಿಧಿಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಕಳೆದ 5 ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ನಾಲ್ಕು (4) ಇರತಕ್ಕದ್ದು. ಹಾಗೂ ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಒಂದು ಸಾವಿರ ರೂಪಾಯಿಗಳು.

10) ಉಳಿತಾಯ / ಚಾಲ್ತಿ / ಠೇವಣಿಖಾತೆಗಳ ವಹಿವಾಟನ್ನು ನಿರಂತರವಾಗಿ ಮಾಡದಿದ್ದ ಪಕ್ಷದಲ್ಲಿ ತಮ್ಮ ಖಾತೆಗಳನ್ನು ಆರ್.ಬಿ.ಐ ನಿಯಮದ ಪ್ರಕಾರ ಖಾತೆಗಳು ಸ್ಥಗಿತಗೊಳ್ಳುವುದು ಅಥವಾ ಡಿ.ಇ.ಎ ಫಂಡ್ (D.E.A.FUND) ಖಾತೆಗೆ ವರ್ಗಾಯಿಸಲಾಗುವುದು.

11) ಸಭೆಗೆ ಸದಸ್ಯರಿಗೆ ಮಾತ್ರ ಪ್ರವೇಶ.

12) ಸದಸ್ಯರುಗಳಿಗೆ ಲಘು ಉಪಹಾರ ವ್ಯವಸ್ಥೆ ಮಾಡಲಾಗಿದೆ.

*** ರೂ. 5,000/- ಮೇಲ್ಪಟ್ಟ ಲಾಭಾಂಶ (ಡಿವಿಡೆಂಡ್) ಪಾವತಿಯಾದಲ್ಲಿ ಶೇ.10 % ರಂತೆ ಟಿ.ಡಿ.ಎಸ್ ಕಡಿತ ಮಾಡಲಾಗುವುದು.**

*** ಇತ್ತೀಚೆಗೆ ಆದಾಯ ತೆರಿಗೆ ಇಲಾಖೆ ಪಾನ್ ಕಾರ್ಡ್‌ಗೆ ಆಧಾರ ಕಾರ್ಡ ಜೋಡಣೆ ಮಾಡುವುದನ್ನು ಕಡ್ಡಾಯಗೊಳಿಸಿರುವದರಿಂದ, ಪಾನ್ ಕಾರ್ಡ್‌ಗೆ ಆಧಾರ್ ಕಾರ್ಡ್ ಜೋಡಣೆ ಮಾಡಿದ ಸದಸ್ಯರು/ ಠೇವಣಿದಾರರು ಮಾತ್ರ 15G /15H ಫಾರ್ಮನ್ನು ಕೊಡಬಹುದಾಗಿದ್ದು, ಇಲ್ಲವಾದಲ್ಲಿ ಪ್ರತಿಶತ ಶೇ.20 % ಟಿ.ಡಿ.ಎಸ್ ಕಡಿತ ಮಾಡಲಾಗುವುದು .**

**ತೆರೆದ ಅಂಚೆ**

**ಗೆ,**

\-------------------------------------------------------------

\-------------------------------------------------------------

\-------------------------------------------------------------

\-------------------------------------------------------------

**ಅಂಚೆ ಬಟವಾಡೆಯಾಗದಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ.**

**ಇಂದ,**
**ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿ.,**
**ನಂ-741, 12ನೇ ಮುಖ್ಯರಸ್ತೆ, 3ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು-560010.**